# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಓ.ಎಸ್ ನಂ. 4/2019 ಸಿ.ಡಬ್ಲ್ಯೂ:1

ಹೆಸರು ಃ ಗಣೇಶ ವೆಂಕ ಪೂಜಾರಿ

ತಂದೆ/ಗಂಡನ ಹೆಸರುಃ ವೆಂಕ ಪೂಜಾರಿ

ವಯಸ್ಸುಃ 35 ವರ್ಷ

ಉದ್ಯೋಗಃ ತಾಲೂಕ ಸರ್ವೆಯರ್

ವಾಸಃ ಸಿದ್ದಾಪುರ

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ15-11-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ**

ನಾನು 2020 ರಿಂದ ಇಲ್ಲಿಯ ವರೆಗೆ ಸಿದ್ದಾಪುರ ತಾಲೂಕ ಸರ್ವೆಯರ್ ಆಗಿ ಕರ್ತವ್ಯನಿರ್ವಹಿಸುತ್ತಿದ್ದೆನೆ.

2. ನಾನು ಈ ಪ್ರಕರಣದಲ್ಲಿ ಕೋರ್ಟ ಕಮಿಷನರ್ ಆಗಿ ನೇಮಕಗೊಂಡಿರುತ್ತೇನೆ. ನಾನು ಈ ಪ್ರಕರಣದಲ್ಲಿ ಕಮಿಷನರ್ ವರದಿಯನ್ನು ನೀಡಿದ್ದು ಸದರಿ ಕಮಿಷನರ್ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ಕಮಿಷನರ್ ವರದಿಯನ್ನು ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಸಿ-1 ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 07-06-2023 ರ ನೋಟೀಸ್ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಸಿ-2 ಎಂದು ಗುರುತಿಸಲಾಯಿತು. ಸದರಿ ನಿ.ಸಿ-2 ನ್ನು ನಮ್ಮ ಇಲಾಖಾ ಸಿಬ್ಬಂದಿಗಳ ಮೂಲಕ ಖುದ್ದಾಗಿ ಜಾರಿ ಮಾಡಿಸಿರುತ್ತೇನೆ.

**ಪಾಟೀಸವಾಲುಃ 1 ರಿಂದ 8 ನೇ ಪ್ರತಿವಾದಿ ಪರ ಶ್ರೀ ಎಂ ಜಿ ಎಚ್ ವಕೀಲರಿಂದಃ**

ನಿ.ಸಿ-1 ರಲ್ಲಿ ನಾನು ನಮೂದಿಸಿರುವ ಸೊವಿನಕೊಪ್ಪ - ಮಾಣಿಹೊಳೆ ಮುಖ್ಯ ರಸ್ತೆಯ ನಂತರ ಸರ್ವೆ ನಂ 104/3 ಮತ್ತು 104/4 ರ ನಂತರ ವಾದಿಯ ಮನೆ ಬರುತ್ತದೆ ಎಂದರೆ ಸರಿ. ಸರ್ವೆ ನಂ 104/3 ಮತ್ತು 104/4 ಪ್ರತಿವಾದಿಗಳ ವೈವಾಟಿಯಲ್ಲಿರುವ ಕ್ಷೇತ್ರ ಎಂದರೆ ಸರಿ. ಸರ್ವೆ



ನಂ 104/1 ವಾದಿಯ ಮನಯ ನಂತರ ಬರುವ ಜಮೀನು ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ 104/3 ಮತ್ತು 104/4 ರಲ್ಲಿ ಖರಾಬ ಜಮೀನು ಇರುತ್ತದೆ. ಆ ಬಗ್ಗೆ ನಾನು ನಿಸಿ-1 ವರದಿಯಲ್ಲಿ ನಮೂದಿಸಿಲ್ಲ ಎಂದರೆ

ಸರಿ. ಸದರಿ ಖರಾಬ ಜಮೀನನ್ನು ಯಾವ ಕಾರಣಕ್ಕಾಗಿ ಬಿಟ್ಟಿರುತ್ತಾರೆ ಎಂದು ನಿಸಿ–1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸರ್ವೆ ನಂ 104/1 ರಲ್ಲಿ ಇರುವ 1 ಗುಂಟೆ 8 ಆಣೆ ಬ ಖರಾಬ ಇರುವ ಬಗ್ಗೆ ನಿ.ಸಿ–1 ರಲ್ಲಿ ನಮೂದಿಸಿರುತ್ತೇನೆ.

2. ನಿ.ಸಿ–1 ಕ್ಕೆ ಸಂಬಂದಿಸಿದಂತೆ ನಾನು ಸರ್ವೆ ಕಾಲಕ್ಕೆ ಮೂಲ ಹಿಸ್ಸಾ ನಕಾಶೆ , ಗ್ರಾಮ ನಕಾಶೆ , ಆಕಾರ ಬಂದ್ ನ್ನು ಪರಿಶೀಲಿಸಿರುತ್ತೇನೆ. ನಾನು ನಿ.ಸಿ–1 ರಲ್ಲಿ ನಮೂದಿಸಿರುವ ರಸ್ತೆ ಮೂಲ ಪಕ್ಕಾ ಬುಕ್ ನಲ್ಲಿ ಇರುತ್ತದೆ . ಆ ಬಗ್ಗೆ ನಾನು ನಿ.ಸಿ–1 ವರದಿಯಲ್ಲಿ ನಮೂದಿಸಿರುವುದಿಲ್ಲ.

3. ಪ್ರತಿವಾದಿಗಳ ಮನೆ ಬೆಟ್ಟ ಸರ್ವೆ ನಂ 103 ರಲ್ಲಿ ಬರುತ್ತದೆ. ನಿ.ಸಿ–1 ವರದಿಯಲ್ಲಿ ನಾನು ಹೇಳಿರುವ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತನ್ನ ಸ್ವಾಧೀನ ದಲ್ಲಿರುವ ಸರ್ವೆ ನಂ 104/3 ಮತ್ತು 104/4 ರಲ್ಲಿ ತೆಂಗಿನ ಗಿಡ, ಅಡಿಕೆ ಗಿಡ, ಮಾವಿನ ಗಿಡ, ಹಲಸಿನ ಗಿಡ ಮತ್ತು ಬಾಳೆಗಿಡಗಳನ್ನು ಬೆಳೆಸಿರುತ್ತಾರೆ ಎಂದರೆ ಸರಿ.

ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಸಕಾರಣ ನೀಡಿದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**